**ಕರ್ನಾಟಕ ಸರ್ಕಾರ**
ವಾಣಿಜ್ಯ ತೆರಿಗೆಗಳ ಇಲಾಖೆ
**ವಾಣಿಜ್ಯ ತೆರಿಗೆ ಜಂಟಿ ಆಯುಕ್ತರ ಕಛೇರಿ(ಆಡಳಿತ)**
**ಮೌಲ್ಯವರ್ಧಿತ ತೆರಿಗೆ ವಿಭಾಗ ಗುಲಬರ್ಗಾ**
**ದೂರವಾಣಿ: 08472–222051 ಫ್ಯಾಕ್ಸ್: 08472–222051**

**ಸಂ: ವಾತೆಜಂಆ/ಆ/ಡಿವಿಓ/ಚಾಮಾವಾ/ಟೆಂಡರ್/2014–15/** **ದಿನಾಂಕ: 29–10–2014**

## ಸಾಮಾನ್ಯ ಟೆಂಡರ್ ಪ್ರಕಟಣೆ

ವಿಷಯ: ವಾಣಿಜ್ಯ ತೆರಿಗೆ ಇಲಾಖೆಯಲ್ಲಿನ ಈ ವಿಭಾಗದ ವಿವಿಧ ಕಚೇರಿಗಳಿಗೆ ಸಾಮಾನ್ಯ ಟೆಂಡರ್ ಪ್ರಕ್ರಿಯೆ ಮುಖೇನ ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆದುಕೊಳ್ಳುವ ಬಗ್ಗೆ.

ಉಲ್ಲೇಖ:–ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರು(ಕ), ಬೆಂಗಳೂರು ರವರ ಪತ್ರ ಸಂಖ್ಯೆ: ವಿಹೆಚ್‌ಟಿ/ಸಿಆರ್–20/2013–14, ದಿನಾಂಕ: 30.09.2014.

–000–

1) ಮೇಲಂಡ ವಿಷಯಕ್ಕೆ ಸಂಬಂಧಪಟ್ಟಂತೆ ಈ ವಿಭಾಗದಲ್ಲಿ ತೆರಿಗೆ ಸಂಗ್ರಹಣೆ ಕೆಲಸಕಾರ್ಯಗಳನ್ನು ನಿರ್ವಹಿಸುವ ಅಧಿಕಾರಿಗಳ ಉಪಯೋಗಕ್ಕಾಗಿ ವಾಹನಗಳನ್ನು ಗರಿಷ್ಠ ರೂ.25,000–00ಗಳ ಮಿತಿಗೆ ಒಳಪಟ್ಟು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರವರಿಂದ ನಿರ್ದೇಶಿಸಲಾಗಿದೆ. ಆದ್ದರಿಂದ ಅರ್ಹತೆಯುಳ್ಳ ವಾಹನ ಮಾಲೀಕರೇ ಚಾಲಕರಾಗಿರುವ ವ್ಯಕ್ತಿಗಳು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ವಾಹನವನ್ನು ಒದಗಿಸಲು ಸೀಲ್ ಮಾಡಿದ ಲಕೋಟೆಯಲ್ಲಿ ಖುದ್ದು ಸಲ್ಲಿಸಬಹುದಾಗಿದೆ. ಆಸಕ್ತ ಒಬ್ಬ ವಾಹನ ಮಾಲೀಕ/ಚಾಲಕರು ಒಂದು ವಾಹನದ ಸೇವೆಗೆ ಮಾತ್ರ ಅರ್ಜಿಯನ್ನು ಸಲ್ಲಿಸುವುದು. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 96 ಶೀವಾನಿ 2012, ದಿನಾಂಕ: 23.08.2012ರಲ್ಲಿ ತಿಳಿಸಿರುವ ನಿಯಮಗಳನ್ವಯ <u>2009 ರ ಮತ್ತು ನಂತರದ ಮಾದರಿಯ</u> ಹಳದಿ ಬಣ್ಣದ ಬೋರ್ಡ್ ಹೊಂದಿರುವ ಟ್ಯಾಕ್ಸಿ (ಟಾಟಾ ಇಂಡಿಕ/ವಿಸ್ಟಾ, ಮಾರುತಿ ಸ್ವಿಫ್ಟ್, ಟೊಯೊಟಾ ಲಿವಾ ಹಾಗೂ ಇತರೆ ಹ್ಯಾಚ್ ಬ್ಯಾಕವುಳ್ಳ) ವಾಹನಗಳ ಸೇವೆಯನ್ನು ಮಾತ್ರ ಪಡೆಯಲಾಗುವುದು.

1. **ಮುಚ್ಚಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 10–11–2014 ಸಮಯ: 5 ಘಂಟೆಯವರೆಗೆ.**
2. **ಟೆಂಡರ್‌ಗಳನ್ನು ತೆರೆಯುವ ದಿನಾಂಕ: 12–11–2014.**
3. **ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಅಂತಿಮ ಪಟ್ಟಿಯನ್ನು ಪ್ರಕಟಿಸುವ ದಿನಾಂಕ: 14–11–2014**
4. **ಟೆಂಡರ್‌ನ ಅವಧಿ: 01–11–2014 ರಿಂದ 31–03–2015.**

<u>ಈ ವಿಭಾಗಕ್ಕೆ ಅವಶ್ಯಕತೆಯಿರುವ ಸ್ಥಳಗಳು ಮತ್ತು ವಾಹನಗಳ ಸಂಖ್ಯೆ ಈ ಕೆಳಗಿನಂತಿದೆ.</u>

| ಕ್ರ.ಸಂ. | ಊರು/ಜಿಲ್ಲೆಯ ಹೆಸರು | ವಾಹನಗಳ ಸಂಖ್ಯೆ | ಕಾರ್ಯಸ್ವರೂಪ |
|---|---|---|---|
| 01. | ಗುಲಬರ್ಗಾ | 02 | ಎಲ್.ವಿ.ಓ–520/525, ಗುಲಬರ್ಗಾ ಕಛೇರಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವದು. |

| | | | |
|---|---|---|---|
| 02. | ಬೀದರ್ | 01 | ಎಲ್.ವಿ.ಓ–540, ಬೀದರ ಕಛೇರಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವದು. |
| 03. | ಯಾದಗೀರ್ | 01 | ಎಲ್.ವಿ.ಓ–550, ಯಾದಗೀರ ಕಛೇರಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವದು. |
| 04. | ರಾಯಚೂರು | 01 | ಎಲ್.ವಿ.ಓ–530, ರಾಯಚೂರು ಕಛೇರಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವದು. |
| 05. | ಸಿಂಧನೂರು | 01 | ಎಲ್.ವಿ.ಓ–535, ಸಿಂಧನೂರು ಕಛೇರಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವದು. |

2) ವಾಹನದ ಪರವಾನಗಿಯ ದಿನಾಂಕ: 01–11–2014 ರಿಂದ 31–03–2015ರವರೆಗೆ ಚಾಲ್ತಿಯಲ್ಲಿ ಇರತಕ್ಕದ್ದು. ವಾಹನದ ಮಾಡೆಲ್ 2009 ಅಥವಾ ನಂತರದ ವರ್ಷದ ಮಾಡೆಲ್‌ಗಳು ಅರ್ಹವಾಗಿರುತ್ತವೆ. ಈ ಕಛೇರಿಯ ಕಾರ್ಯವ್ಯಾಪ್ತಿಯ ಸ್ಥಳದ ಸುತ್ತಮುತ್ತಲಿನ ವಾಹನ ಚಾಲಕರುಗಳಿಗೆ, ಮೊದಲು ದಾಖಲೆ ಸಲ್ಲಿಸಿದವರಿಗೆ, ಉತ್ತಮ ಸ್ಥಿತಿಯ ಮತ್ತು ಇತ್ತೀಚಿನ ಮಾಡೆಲ್ ವಾಹನಗಳಿಗೆ ಆದ್ಯತೆ ಕೊಡಲಾಗುವುದು.

3) ಈ ವಿಭಾಗದ ಮುಖ್ಯಸ್ಥರು ಕಛೇರಿಯ ಕೆಲಸ ಕಾರ್ಯಗಳಿಗೆ ಅನುಗುಣವಾಗಿ ತಕ್ಷಣಕ್ಕೆ ಲಭ್ಯವಿರುವ ವಾಹನವನ್ನು ಬಾಡಿಗೆಯ ಮೇಲೆ ತೆಗೆದುಕೊಳ್ಳುವ ಸಂದರ್ಭದಲ್ಲಿ ವಾಹನದ ಗುಣಮಟ್ಟವನ್ನು ಮತ್ತು ಚಾಲನಾ ಕೌಶಲ್ಯವನ್ನು ಪರೀಕ್ಷೆಗೆ ಒಳಪಡಿಸಲಾಗುವುದು. ಯಾವುದೇ ಕಾರಣ ನೀಡದೆ ವಾಹನವನ್ನು ಬದಲಿಸುವ, ತಕ್ಷಣವೇ ನಿರಾಕರಿಸುವ ಅಧಿಕಾರ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರಿಗೆ ಇರುತ್ತದೆ.

4) ವಾಣಿಜ್ಯ ತೆರಿಗೆ ಇಲಾಖೆಯು ಅಗತ್ಯವಿರುವ ವಾಹನಗಳನ್ನು ಇ–ಸಂಗ್ರಹಣೆ ಮುಖಾಂತರ ಬಾಡಿಗೆಗೆ ಪಡೆದುಕೊಳ್ಳಲು ಈ ಮೇಲೆ ಪ್ರಸ್ತಾಪಿಸಿರುವಂತೆ ಉಂಟಾಗುವ ತಾಂತ್ರಿಕ ಅಡಚಣೆಗಳ ಕಾರಣದಿಂದ ಇ–ಸಂಗ್ರಹಣೆಗೆ ಪರ್ಯಾಯವಾಗಿ ಸಾಮಾನ್ಯ ಟೆಂಡರ್ ಪ್ರಕ್ರಿಯೆಯ ಮುಖೇನ ವಾಹನಗಳ ಸೇವೆಯನ್ನು ಪಡೆದುಕೊಳ್ಳಲು ಸಾಧ್ಯವಾಗುವಂತೆ ಕೆ.ಟಿ.ಪಿ.ಪಿ.ಅಧಿನಿಯಮದ ನಿಯಮ 4(ಜಿ)ಗೆ ಉಲ್ಲೇಖ (7)ರಂತೆ ಸರ್ಕಾರವು ವಿನಾಯಿತಿಯನ್ನು ನೀಡಿರುತ್ತದೆ.

5) ಈ ವಿಭಾಗದ ಮುಖ್ಯಸ್ಥರಾದ ಜಂಟಿ ಆಯುಕ್ತರು(ಆಡಳಿತ), ಮೌ.ತೆ.ವಿಭಾಗ ಗುಲಬರ್ಗಾ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನ್ವಯ Tender inviting and other accepting Authority ಆಗಿರುತ್ತಾರೆ.

6) ಸಾಂಪ್ರದಾಯಿಕ ಟೆಂಡರ್ ಪ್ರಕ್ರಿಯೆಗೆ ಅನುಗುಣವಾಗಿ ಜನಪ್ರಿಯ ದಿನಪತ್ರಿಕೆಯೊಂದರಲ್ಲಿ ಅಂದರೆ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಹಾಗೂ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

29/10/14

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಆಡಳಿತ) ಡಿ.ವ್ಹಿ.ಓ., ಗುಲಬರ್ಗಾ.

7) <u>ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು/ವಿವರಗಳು.</u>

1. ಅರ್ಜಿದಾರರ ಹೆಸರು, ವಿಳಾಸ ಹಾಗೂ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು– 2
2. ವಿಳಾಸದ ದಾಖಲೆ (ಮತದಾರರ ಗುರುತಿನ ಚೀಟಿ/ ರೇಷನ್‌ಕಾರ್ಡ್/ ಆಧಾರ್ ಕಾರ್ಡ್/ಪಾಸ್‌ಪೋರ್ಟ್ ಅಥವಾ ಇತರೆ ಭಾವಚಿತ್ರ ಹೊಂದಿರುವ ಗುರುತಿನ ಚೀಟಿ).
3. ವಾಹನದ ನೋಂದಣಿ ಪುಸ್ತಕದ ಪ್ರತಿ.
4. ವಾಹನದ ವಿಮಾ ಪಾಲಿಸಿಯ ಪ್ರತಿ.
5. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನ ಚಾಲನಾ ಪರವಾನಗಿ ಪ್ರತಿ.
6. ರೋಡ್ ಟ್ಯಾಕ್ಸ್ ಪಾವತಿಸಿರುವ ವಿವರ.
7. ಮೇಲ್ಕಂಡ ವಿವರಗಳು ಹಾಗೂ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಸೀಲು ಮಾಡಿದ ಲಕೋಟೆಯಲ್ಲಿಟ್ಟು ಲಕೋಟೆಯ ಮೇಲೆ ದಪ್ಪ ಅಕ್ಷರದಲ್ಲಿ **<u>ಖಾಸಗಿ ವಾಹನ ಮಾಲೀಕರ/ಚಾಲಕರ ಹೊರಗುತ್ತಿಗೆ ಸೇವೆ – ಸಲ್ಲಿಸಲು ಅರ್ಜಿ</u>** ಎಂದು ನಮೂದಿಸುವುದು.
8. ಅಪೂರ್ಣ ವಿವರಗಳು ಹಾಗೂ ಮೇಲ್ಕಂಡ ದಾಖಲಾತಿಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
9. ಯಾವುದೇ ಕಾರಣವನ್ನು ನೀಡದೆ ಅರ್ಜಿಯನ್ನು ತಿರಸ್ಕರಿಸುವ ಹಕ್ಕನ್ನು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಆಡಳಿತ), ಡಿವಿಒ ಗುಲಬರ್ಗಾ ಇವರಿಗೆ ಕಾಯ್ದಿರಿಸಲಾಗಿದೆ.

8) ಅರ್ಜಿಗಳನ್ನು ಖುದ್ದಾಗಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ಡಿ.ವಿ.ಒ ಗುಲಬರ್ಗಾ ರವರ ಶಾಖೆಯಲ್ಲಿ ಸಲ್ಲಿಸುವುದು ಹಾಗೂ ಅರ್ಜಿಗಳ ಸ್ವೀಕೃತಿ ಅನುಸಾರವಾಗಿ ಕ್ರಮಸಂಖ್ಯೆ ನೀಡಲಾಗುವುದು.

**<u>ದರಪಟ್ಟಿ ವಿವರ ಪ್ರತಿ ತಿಂಗಳು:</u>**

**ಮೊದಲ 2,400 ಕಿ.ಮೀ. ಗರಿಷ್ಠ ರೂ.25,000–00 (ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ)**

**ನಂತರದ ಪ್ರತಿ ಕಿ.ಮೀ. ರೂ.5.50–00 (ಐದು ರೂಪಾಯಿ ಐವತ್ತು ಪೈಸೆಗಳು ಮಾತ್ರ) (ವಿಶೇಷ ಸಂದರ್ಭಗಳಲ್ಲಿ ಮಾತ್ರ)**

**300 ಘಂಟೆಯ ನಂತರ ಪ್ರತಿ ಘಂಟೆಗೆ ರೂ.40–00 (ನಲವತ್ತು ರೂಪಾಯಿಗಳು ಮಾತ್ರ)**

9) ಆಯ್ಕೆಯಾದ ವಾಹನಗಳ ಚಾಲಕರುಗಳು ಈ ಕೆಳಕಂಡ ಷರತ್ತುಗಳಿಗೂ ಒಳಪಟ್ಟಿರುತ್ತಾರೆ.

**1) ಅನಾರೋಗ್ಯವು ಸೇರಿದಂತೆ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಒಂದು ತಿಂಗಳಲ್ಲಿ ಎರಡು ದಿನ ಮಾತ್ರ ವಾಹನ ಉಪಯೋಗಿಸಿರುವ ಕಛೇರಿಯ ಅಧಿಕಾರಿಯವರಿಂದ ಅನುಮತಿ ಪಡೆದು, ಮಾಲೀಕ/ಚಾಲಕರು ರಜೆ ಪಡೆಯಬಹುದು. ಆ ಅವಧಿಯಲ್ಲಿ ಬದಲಿ ವಾಹನದ ವ್ಯವಸ್ಥೆ ಕಡ್ಡಾಯವಾಗಿ ಮಾಡಲೇಬೇಕು.ಇಲ್ಲದಿದ್ದರೆ ಗೈರು ಹಾಜರಿ ದಿವಸದ ಬಾಡಿಗೆ ಕಡಿತಗೊಳಿಸಲಾಗುವುದು.**

**2) ಮಾಸಿಕ ಬಾಡಿಗೆ ಹೊರಗುತ್ತಿಗೆ ಆಧಾರದ ಮೇಲೆ ಹಾಗೂ ಕರಾರಿನಂತೆ ದರಗಳಿಗೆ ಒಳಪಟ್ಟು ಮಾತ್ರ ವಾಹನಗಳನ್ನು ಬಾಡಿಗೆಗೆ ಪಡೆಯಲಾಗುತ್ತದೆ.**

**3) ಚಾಲಕರಾಗಿರುವವರು ಕಟ್ಟುನಿಟ್ಟಾಗಿ ಸಮಯ ಪಾಲನೆ ಮಾಡತಕ್ಕದ್ದು. ವಾಹನ ಉಪಯೋಗಿಸುವ ಕಛೇರಿಯ ಅಧಿಕಾರಿಯಿಂದ ಈ ಕುರಿತು ದೂರುಗಳು ಬಂದಲ್ಲಿ ಅಂತಹ ವಾಹನದ ಬಳಕೆಯನ್ನು ನಿಲ್ಲಿಸುವ, ಒಪ್ಪಂದವನ್ನು ರದ್ದುಪಡಿಸುವ ಅಧಿಕಾರ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರದ್ದಾಗಿರುತ್ತದೆ.**



29/10/14

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಆಡಳಿತ) ಡಿ.ವಿ.ಓ., ಗುಲಬರ್ಗಾ.

4) ಇಲಾಖೆಯ ಈ ವಿಭಾಗದ ಪ್ರತಿ ಕಛೇರಿಯಲ್ಲಿ ಉಪಯೋಗಿಸಿರುವ ಪ್ರತಿ ವಾಹನಕ್ಕೆ ಸಂಬಂಧಿಸಿದಂತೆ ನಿಗದಿತ ಲಾಗ್ ಪುಸ್ತಕವನ್ನು ನಿರ್ವಹಿಸಿ ಪ್ರತಿ ದಿನದ ಆರಂಭ ಮತ್ತು ಅಂತ್ಯದವರೆಗಿನ ವಾಹನ ಓಡಾಟದ ಸಂಬಂಧ ಈ ಪುಸ್ತಕದಲ್ಲಿ ಅಗತ್ಯ ದಾಖಲೆಗಳನ್ನು ನಮೂದಿಸಿ ವಾಹನವನ್ನು ಉಪಯೋಗಿಸಿದ ಅಧಿಕಾರಿಯವರಿಂದ ರುಜು ಪಡೆಯತಕ್ಕದ್ದು.

5) ಈ ವಿಭಾಗದ ಪ್ರತಿ ಕಛೇರಿಯಲ್ಲಿ ಉಪಯೋಗಿಸುವ ವಾಹನ ಓಡಾಟಕ್ಕೆ ಸಂಬಂಧಿಸಿದಂತೆ ಆಯಾ ದಿನದ ಆರಂಭಿಕ ಮತ್ತು ಅಂತಿಮ ಸಮಯದ ಗಣನೆ ಮತ್ತು ಕಿಲೋಮೀಟರ್‌ನ ಗಣನೆಯು ಆಯಾ ಕಛೇರಿಯ ಆವರಣದಿಂದ ಕಛೇರಿ ಕಾರ್ಯ ನಿಮಿತ್ತ ಆ ವಾಹನ ಹೊರಡುವ ಕ್ಷಣದಿಂದ ಪ್ರಾರಂಭವಾಗುತ್ತದೆ ಹಾಗೂ ಆ ದಿನದ ಕಾರ್ಯ ಮುಗಿದ ಮೇಲೆ ಅದೇ ಸ್ಥಳದಲ್ಲಿ ಕೊನೆಗೊಳ್ಳುತ್ತದೆ.

6) ಯಾವುದೇ ತಿಂಗಳಿನ ವಾಹನ ಬಾಡಿಗೆ ಹಣವನ್ನು ಅದರ ಮುಂದಿನ ತಿಂಗಳು ವಾಹನ ಚಾಲಕರು ಸಲ್ಲಿಸುವ ಬಿಲ್ಲಿನ ಆಧಾರದ ಮೇಲೆ ಪಾವತಿಸಲಾಗುವುದು. ಇಲಾಖೆಗೆ ಬಾಡಿಗೆ ಹಣದ ಬಿಲ್ಲನ್ನು ಸಂಬಂಧಿಸಿದ ವಾಹನದ ಲಾಗ್‌ಪುಸ್ತಕದ ಕಛೇರಿಯಿಂದ ದೃಢೀಕೃತವಾದ ನಕಲು ಪ್ರತಿ ಮತ್ತು ವಾಹನ ಉಪಯೋಗಿಸಿದ ಕಛೇರಿಯ ಮುಖ್ಯಸ್ಥರ ಸೂಕ್ತ ಪ್ರಮಾಣಪತ್ರದ ಜೊತೆ ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಸಲ್ಲಿಸತಕ್ಕದ್ದು.

7) ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಈ ಇಲಾಖೆಗೆ ಒದಗಿಸುವ ಕಾಲಮಿತಿಯು ಆರಂಭದಲ್ಲಿ ದಿನಾಂಕ : 01-11-2014 ರಿಂದ 31-03-2015ರವರೆಗೆ ಇರುತ್ತದೆ. ಅಗತ್ಯವಿದ್ದರೆ ಇದೇ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅಥವಾ ಒಂದು ತ್ರೈಮಾಸಿಕದ ಅವಧಿಗೆ ಆಯುಕ್ತರ ಲಿಖಿತ ಆದೇಶದ ಮೇರೆಗೆ ಮುಂದುವರಿಸಬಹುದಾಗಿದೆ. ಇದಕ್ಕೂ ಮೊದಲು ಸಹ ಕರಾರು ರದ್ದುಗೊಳಿಸುವ ಹಕ್ಕು ಜಂಟಿ ಆಯುಕ್ತರವರದ್ದಾಗಿರುತ್ತದೆ. ಅಲ್ಲದೆ ಅವಧಿಗೆ ಮುನ್ನಾ ಸಹ ಯಾವುದೇ ನೋಟೀಸ್ ನೀಡದೆ ಮೇಲ್ಕಂಡ ಕರಾರನ್ನು ರದ್ದುಗೊಳಿಸುವ ಹಕ್ಕು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು, ಮೌ.ತೆ.ವಿಭಾಗ ಗುಲಬರ್ಗಾ ರವರಿಗೆ ಇರುತ್ತದೆ.

8) ವಾಹನವನ್ನು ಸರ್ಕಾರಿ ಕೆಲಸಕ್ಕೆ ಉಪಯೋಗಿಸುವಾಗ "ಸರ್ಕಾರಿ ಕೆಲಸದ ಮೇಲೆ" ಅಥವಾ "ಕರ್ನಾಟಕ ಸರ್ಕಾರದ ಸೇವೆಯಲ್ಲಿ" ಎಂಬ ಫಲಕವಿರಬೇಕು. ಪಾರ್ಕಿಂಗ್ ಶುಲ್ಕ ಇತ್ಯಾದಿ ವಾಹನ ಮಾಲೀಕರೇ ಚಾಲಕರಾಗಿರುವವರು ಭರಿಸತಕ್ಕದ್ದು.

9) ವಾಹನದ ಯಾವುದೇ ಕಾನೂನು ಉಲ್ಲಂಘನೆಗೆ ಸ್ವತ: ಮಾಲೀಕ/ಚಾಲಕರೇ ಜವಾಬ್ದಾರರಾಗಿರುತ್ತಾರೆ.

10) ವಾಹನವನ್ನು ಕಛೇರಿಯ ಕೆಲಸಕ್ಕೆ ಉಪಯೋಗಿಸಿದ ನಂತರ ಸಂಬಂಧಪಟ್ಟ ಅಧಿಕಾರಿಗಳಿಂದ ಕಾಲಕಾಲಕ್ಕೆ ಸರಿಯಾಗಿ ಉಪಯೋಗಿಸಿದ ವಿವರದೊಂದಿಗೆ ಟ್ರಿಪ್ ಶೀಟ್‌ನಲ್ಲಿ ಭರ್ತಿಮಾಡಿ ಸಹಿ ಮಾಡುವುದು.

11) ಈ ಇಲಾಖೆಗೆ ಹೊರ ಗುತ್ತಿಗೆ ಆಧಾರದ ಮೇಲೆ ವಾಹನವನ್ನು ಪಡೆದಿರುವಂತಹ ಅವಧಿಯಲ್ಲಿ ಬೇರೆ ಯಾವುದೇ ಇಲಾಖೆಯಲ್ಲಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಅಥವಾ ಬೇರೆ ಇನ್ಯಾವುದೇ ಕೆಲಸಗಳಿಗೆ ವಾಹನವನ್ನು ಉಪಯೋಗಿಸುವಂತಿಲ್ಲ ಹಾಗೂ ವಾಹನವನ್ನು ಪೂರ್ಣವಾಗಿ "ವಾಣಿಜ್ಯ ತೆರಿಗೆ ಇಲಾಖಾ ಸೇವೆಗಾಗಿ" ಮೀಸಲಿಡತಕ್ಕದ್ದು.

29/10/14

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಆಡಳಿತ) ಡಿ.ವ್ಹಿ.ಓ., ಗುಲಬರ್ಗಾ.

12) ವಾಹನ ಚಾಲಕರು ರಜಾ ದಿನಗಳಂದು ಕೇಂದ್ರಕಚೇರಿ ಬಿಡುವ ಸಂದರ್ಭದಲ್ಲಿ ಜಂಟಿ ಆಯುಕ್ತರ ಅನುಮತಿಯನ್ನು ಪಡೆಯತಕ್ಕದ್ದು ಹಾಗೂ ರಜಾ ದಿನಗಳಲ್ಲಿ ಕೆಲಸ ನಿರ್ವಹಿಸುವಂತಹ ಸಂದರ್ಭ ಬಂದಲ್ಲಿ ಅಂತಹ ಸಮಯದಲ್ಲಿ ಬೇಷರತ್ತಾಗಿ ಕೆಲಸ ನಿರ್ವಹಿಸತಕ್ಕದ್ದು.

13) ವಾಹನ ಚಾಲಕ/ಮಾಲಿಕರು ತಮ್ಮ ಟೆಂಡರ್ ಅರ್ಜಿಯಲ್ಲಿ ತಾವು ಕಾರ್ಯನಿರ್ವಹಿಸಲು ಇಚ್ಛಿಸುವ ಜಿಲ್ಲಾ ವ್ಯಾಪ್ತಿಯನ್ನು ಮೇಲೆ ತಿಳಿಸಿದಂತೆ ಸ್ಪಷ್ಟವಾಗಿ ಸೂಚಿಸತಕ್ಕದ್ದು, ಅಗತ್ಯಕ್ಕೆ ಅನುಗುಣವಾಗಿ ಯಾವುದೇ ವಾಹನವನ್ನು ವಿಭಾಗದ ಯಾವುದೇ ಜಿಲ್ಲಾ ಕಛೇರಿಗಳ ಕಾರ್ಯವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವಂತೆ ಸೂಚಿಸುವ ಅಧಿಕಾರವನ್ನು ಜಂಟಿ ಆಯುಕ್ತರು (ಆಡಳಿತ), ಡಿ.ವಿ.ಓ ಗುಲಬರ್ಗಾ ಇವರಿಗೆ ಇರುತ್ತದೆ.

14) ಈಗಾಗಲೇ ಇಲಾಖಾ ಕಛೇರಿಗಳಲ್ಲಿ ನಿಷ್ಕಂಳಂಕ ಸೇವೆ ಸಲ್ಲಿಸಿ ಅನುಭವ ಇರುವ ಮಾಲಿಕ/ಚಾಲಕರ ವಾಹನಗಳನ್ನು ಆದ್ಯತೆಯ ಮೇಲೆ ಪರಿಗಣೀಸಲಾಗುವದು.

15) ಮೇಲಿನ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸದಿರುವುದು ಮತ್ತು ನಿರ್ಲಕ್ಷಿಸಿರುವುದು ಕಂಡು ಬಂದಲ್ಲಿ ಯಾವುದೇ ಸೂಚನೆ ನೀಡದೇ ಹೊರ ಗುತ್ತಿಗೆ ಆಧಾರದ ಕರಾರನ್ನು ರದ್ದು ಪಡಿಸಲಾಗುವುದು.

29/10/2014

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ),
ಮೌಲ್ಯವರ್ಧಿತ ತೆರಿಗೆ ವಿಭಾಗ, ಗುಲಬರ್ಗಾ.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಆಡಳಿತ) ಡಿ.ವ್ಹಿ.ಓ., ಗುಲಬರ್ಗಾ.